**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ 161/2019** **ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **27.10.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ** 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಪಿ.ಎಸ್. ವಕೀಲರಿಂದಃ

ನಾನು ಮನೆ ಕಟ್ಟುವ ಮುನ್ನ ಕಲ್ಲುಕಂಬಗಳನ್ನು ಎಲ್ ಆಕಾರದಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆಯ ಮುಖ್ಯದ್ವಾರದ ಉತ್ತರ ದಿಕ್ಕಿನ ಕಡೆಗೆ ಮುಳ್ಳುತಂತಿಗಳನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ನಮ್ಮ ಮನೆಯ ಕಂಪೌಂಡ್ ಗೋಡೆಯನ್ನು ಪ್ರತಿವಾದಿಯವರಿಗೆ ಸೇರಿದ ಶೆಡ್ ನ್ನು ಸೇರಿಸಿ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು ನನ್ನ ಗಂಡನ ತಂದೆಯವರಿಗೆ ವಿಭಾಗದಲ್ಲಿ ಬಂದಿರುವ ಆಸ್ತಿಯಾಗಿರುತ್ತದೆ. ಸದರಿ ವಿಭಾಗ ನನ್ನ ಮಾವ ಮತ್ತು ಅವರ ಕುಟುಂಬ ಸದಸ್ಯರ ಮಧ್ಯೆ ಆಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಿಭಾಗಪತ್ರದಲ್ಲಿರುವ ದಾವಾ ಆಸ್ತಿಯ ವಿಸ್ತೀರ್ಣ ಹಾಗೂ ಈ ದಾವೆಯಲ್ಲಿನ ದಾವಾ ಆಸ್ತಿಯ ವಿಸ್ತೀರ್ಣ ಬೇರೆಯಿರುತ್ತದೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟುವ ಮುನ್ನ ನಾನು ಹಾಕಿರುವ ಕಲ್ಲುಕಂಬದಿಂದ ಪ್ರತಿವಾದಿಯ ಶೆಡ್ ನ ನಡುವೆ 4 ಅಡಿ ಜಾಗ ಇತ್ತು ಎಂದರೆ ಸಾಕ್ಷಿಯು ರಸ್ತೆಯಿತ್ತು ಎಂದು ನುಡಿಯುತ್ತಾರೆ. ಸದರಿ 4 ಅಡಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಪಶ್ಚಿಮ ದಿಕ್ಕಿನಲ್ಲೂ 4 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾರ್ವಜನಿಕ ರಸ್ತೆಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯವರಿಗೆ ನಾವು ನೋಟೀಸು ನೀಡಿರುವುದಿಲ್ಲ. ಪುರಸಭೆಯರಿಂದ ನೋಟೀಸು ಜಾರಿ ಮಾಡಿಸಿರುತ್ತೇನೆ. ಪುರಸಭೆ ಅಧಿಕಾರಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ವಿವಾದಿತ ರಸ್ತೆಯ ಅಕ್ಕ-ಪಕ್ಕದಲ್ಲಿ ಸುಮಾರು 20 ಮನೆಗಳು ಇವೆ ಎಂದರೆ ಸರಿ. ಸದರಿ ಮನೆಯ ನಿವಾಸಿಗಳ ಜೊತೆಗೆ ನಾನು ವಿಶ್ವಾಸದಿಂದ ಇರುತ್ತೇನೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ವಾದಿಗಳನ್ನಾಗಿ ಸೇರಿಸುವ ಪ್ರಯತ್ನ

ಮಾಡಿರುವುದಿಲ್ಲ. ನನಗೂ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ನಾನು ಹಾಕಿರುವುದಿಲ್ಲ. ಸದರಿ ರಸ್ತೆ ಡಾಂಬರು ರಸ್ತೆಯಾಗಿದ್ದು ಈಗ ಸಿಮೆಂಟ್ ರಸ್ತೆಯಾಗಿರುತ್ತದೆ ಎಂದರೆ ಸಾಕ್ಷಿಯು ಮೊದಲು ಮಣ್ಣು ರಸ್ತೆಯಾಗಿದ್ದು ಈಗ ಸಿಮೆಂಟ್ ರಸ್ತೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.ಸದರಿ ಸಿಮೆಂಟ್ ರಸ್ತೆಯ ಎರಡೂ ಬದಿ ಚರಂಡಿಗಳು ಇರುತ್ತವೆ ಎಂದರೆ ಸರಿ. ಪ್ರತಿವಾದಿಗಳು ರಸ್ತೆಯನ್ನು ಒತ್ತುವರಿ ಮಾಡಿದ್ದೇ ಆದರೆ ಸದರಿ ಒತ್ತುವರಿಯನ್ನು ತೆರವುಗೊಳಿಸಿ ನಂತರ ರಸ್ತೆಯನ್ನು ನಿರ್ಮಾಣ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಒತ್ತುವರಿ ಮಾಡಿದ ಜಾಗದಲ್ಲಿ ರಸ್ತೆ ನಿರ್ಮಿಸಲು ಪ್ರತಿವಾದಿಯವರು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸಿಮೆಂಟ್ ರಸ್ತೆಯಾಗುವ ಮುನ್ನ ಶೌಚಾಲಯ ಇತ್ತು ಎಂದರೆ ಸರಿಯಲ್ಲ. ಸದರಿ ರಸ್ತೆ ನೇರವಾಗಿರುವುದಿಲ್ಲ ಹಾಗೂ ಅಡ್ಡಾದಿಡ್ಡಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆ ಕೆಲವು ಭಾಗದಲ್ಲಿ ಅಗಲ ಕಡಿಮೆಯಿದ್ದು ಕೆಲವು ಭಾಗಗಳಲ್ಲಿ ಬಹಳ ಅಗಲವಿರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ವಾಸವಿ ಮಹಲ್ ಗೆ ಹೋಗುವ ಕಡೆಗೆ ಅಗಲ ಕಡಿಮೆ ಯಿದ್ದು ಪ್ರತಿವಾದಿಯ ಮನೆಯ ಕಡೆಗೆ ಅಗಲ ಜಾಸ್ತಿಯಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮ ಹಾಗೂ ದಕ್ಷಿಣ ದಿಕ್ಕಿನಲ್ಲಿ ಯಾವುದೇ ಪ್ರವೇಶ ದ್ವಾರವಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಮುಂಭಾಗಿಲು ಪೂರ್ವದ ಕಡೆ ಇರುತ್ತದೆ ಎಂದರೆ ಸಾಕ್ಷಿಯ ಉತ್ತರದ ಕಡೆ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಮುಂದೆ ರಸ್ತೆಯು ಗಲ್ಲಿ ತರಹ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮುಂದಿನ ರಸ್ತೆಗಿಂತ ಪ್ರತಿವಾದಿಯ ಮನೆಯ ಮುಂದಿನ ರಸ್ತೆ ಅಗಲವಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಗೆ ಪ್ರತಿವಾದಿಯವರ ಗುಡಿಸಲು ಹೊರತುಪಡಿಸಿ ಉಳಿದ ಮನೆಗಳು ಆರ್.ಸಿ.ಸಿ. ಹಾಗೂ ಹಂಚಿನ ಮನೆಗಳು ಆಗಿರುತ್ತವೆ ಎಂದರೆ ಸರಿ. ನಮ್ಮ ಮನೆಯಲ್ಲಿ ಸರ್ಕಾರಿ ನೌಕರರು ಇರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಕಾರಣಗಳಿಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

<u>**ಮುಂದುವರಿದ ಪಾಟಿ ಸವಾಲುಃ**</u> **5** ನೇ ಪ್ರತಿವಾದಿಯವರಿಂದಃ **5** ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರುಹಾಜರಾಗಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇರುವುದಿಲ್ಲ.**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**